(159)

**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\1290\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:03/08/2020

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ\ ಸಾರ್ವಜನಿಕ ನೌಕರರಾದ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಚೌಡದೇನಹಳ್ಳಿ ಗ್ರಾಮ ಪಂಚಾಯತ್ 1) ಅಧ್ಯಕ್ಷರಾದ ಶ್ರೀಮತಿ.ಮಂಜುಳಮ್ಮ ಮತ್ತು 2) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಕೆ.ಶಿವಾನಂದ ಕುಮಾರ್ [ಪ್ರಸ್ತುತ ಹುತ್ತೂರು ಗ್ರಾಮ ಪಂಚಾಯತ್] ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕ್ ಚೇಳೂರು ಹೋಬಳಿ ಪುಲಗಲ ಅಂಚೆ ಊದವಾರಪಲ್ಲಿ ಗ್ರಾಮದ ನಿವಾಸಿಯಾದ ಶ್ರೀ.ವಿ.ರಾಮಕೃಷ್ಣಪ್ಪ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಚೌಡದೇನಹಳ್ಳಿ ಗ್ರಾಮ ಪಂಚಾಯತ್ 1) ಕಾರ್ಯದರ್ಶಿ ಶ್ರೀ.ಜಿ.ಎಂ.ನಾರಾಯಣಸ್ವಾಮಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು 2) ಶ್ರೀ.ಕೆ.ಶಿವಾನಂದ ಕುಮಾರ್ [ಪ್ರಸ್ತುತ ಹುತ್ತೂರು ಗ್ರಾಮ ಪಂಚಾಯತ್] ಮತ್ತು 3) ಶ್ರೀಮತಿ.ಮೇಘ.ಎಸ್.ಎನ್ ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಚೌಡದೇನಹಳ್ಳಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ, 14ನೇ ಹಣಕಾಸು ಯೋಜನೆಯಡಿಯಲ್ಲಿ ದಿನಾಂಕ:01/01/16 ರಿಂದ 30/12/17 ರವರೆಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ? ಅದರಲ್ಲಿ ಎಷ್ಟು ಹಣ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ? ಎಂಬ ಬಗ್ಗೆ ಕ್ರಿಯಾ ಯೋಜನೆ ಮತ್ತು ಬ್ಯಾಂಕ್ ಫಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿದ್ದು, ಎದುರುದಾರರು ಬ್ಯಾಂಕ್ ಫಾರ್ ಶೀಟ್ ಮಾತ್ರ ನೀಡಿದ್ದಾರೆ. ಅದನ್ನು ಪರಿಶೀಲಿಸಲಾಗಿ, ₹22,02,905/- ಹಣ ಬಂದಿರುವುದು ಕಂಡು ಬಂದಿದೆ. ಆದರೆ, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ನೀಡದಿರುವುದರಿಂದ, ಮಾಹಿತಿ ಹಕ್ಕು ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ನೀಡಿಲ್ಲ. ಸದರಿ ಗ್ರಾಮ ಪಂಚಾಯತ್‌ಗೆ ಮಂಜೂರಾದ ಹಣವನ್ನು

ಎದುರುದಾರರು ಅಭಿವೃದ್ಧಿ ಕೆಲಸಗಳಿಗೆ ಬಳಸದೇ ದುರುಪಯೋಗ ಪಡಿಸಿಕೊಂಡಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಕಾರ್ಯದರ್ಶಿ ಶ್ರೀ.ಜಿ.ಎಂ.ನಾರಾಯಣಸ್ವಾಮಿ – 1ನೇ ಎದುರುದಾರರು ದಾಖಲೆಗಳ ದೃಢೀಕರಿಸಿದ ಪ್ರತಿಯನ್ನು ಸಲ್ಲಿಸಿದ್ದು, ಪ್ರತ್ಯೇಕ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

4. ಶ್ರೀ.ಕೆ.ಶಿವಾನಂದ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ – 2ನೇ ಎದುರುದಾರರು ತಮ್ಮ ಅಕ್ಷೇಪಣೆಯಲ್ಲಿ, ತಾವು ಚೌಡದೇನಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ದಿನಾಂಕ:12/01/16 ರಿಂದ 27/10/17 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ತಾವು ಯಾವುದೇ ಹಣವನ್ನು ದುರುಪಯೋಗ ಪಡಿಸಿಕೊಂಡಿಲ್ಲವೆಂದು ಹೇಳಿದ್ದಾರೆ.

5. ಶ್ರೀಮತಿ.ಮೇಘ.ಎಸ್.ಎನ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ – 3ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

6. ಶ್ರೀ.ಜಿ.ಎಂ.ನಾರಾಯಣಸ್ವಾಮಿ, ಕಾರ್ಯದರ್ಶಿ ಮತ್ತು ಶ್ರೀಮತಿ.ಮೇಘ.ಎಸ್.ಎನ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಚೌಡದೇನಹಳ್ಳಿ ಗ್ರಾಮ ಪಂಚಾಯತ್ ರವರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟು ಶ್ರೀಮತಿ.ಮಂಜುಳಮ್ಮ, ಅಧ್ಯಕ್ಷರು, ಚೌಡದೇನಹಳ್ಳಿ ಗ್ರಾಮ ಪಂಚಾಯತ್ ರವರನ್ನು 1ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ದಾಖಲೆಗಳನ್ನು ಸಲ್ಲಿಸುತ್ತಾ ದೂರುದಾರರಿಗೆ ಈಗಾಗಲೇ ದಾಖಲೆಗಳನ್ನು ನೀಡಿದೆ. ದಿ:01/01/16 ರಿಂದ 19/11/17 ರವರೆಗೆ 2ನೇ ಎದುರುದಾರರು; ಹಾಗೂ ದಿ:20/11/17 ರಿಂದ 30/12/17 ರವರೆಗೆ ಶ್ರೀಮತಿ.ಮೇಘ.ಎಸ್.ಎನ್ ರವರು ಕರ್ತವ್ಯ ನಿರ್ವಹಿಸಿದ್ದಾರೆಂದು ಹೇಳಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಹದಿನಾಲ್ಕನೇ [14ನೇ] ಹಣಕಾಸು ಯೋಜನೆಯಡಿ ಸರ್ಕಾರದಿಂದ ಚೌಡದೇನಹಳ್ಳಿ ಗ್ರಾಮ ಪಂಚಾಯತ್‌ಗೆ ಬಿಡುಗಡೆಯಾಗುವ ಅನುದಾನವು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್, ನರಸಾಪುರ ಶಾಖೆಯಲ್ಲಿರುವ ಪಂಚಾಯತ್‌ನ ಖಾತೆ ಸಂ:10865101040528ಗೆ ಜಮಾ ಆಗುತ್ತಿದೆ. ಬ್ಯಾಂಕ್

OD/1290/18

161



ತಃಖ್ತೆಯನ್ವಯ ಏಪ್ರಿಲ್, 2016 ರಿಂದ ಮಾರ್ಚ್, 2017ರ ಅವಧಿಯಲ್ಲಿ ಸದರಿ ಖಾತೆಯಿಂದ ಖರ್ಚು ಮಾಡಿದ ಹಣದ ವಿವರಗಳು ಈ ಕೆಳಗಿನಂತಿವೆ –

| ಕ್ರ.ಸಂ. | ವಿವರ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|---|
| 1 | ಶ್ರೀ ಚೌಡೇಶ್ವರಿ ಏಜೆನ್ಸೀಸ್ | 101262 | 07/06/16 | 127638.00 |
| 2 | ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್ | 101264 | 08/06/16 | 100000.00 |
| 3 | ತಿಮ್ಮರಾಯಸ್ವಾಮಿ ಹಾರ್ಡ್‌ವೇರ್, ವೇಮಗಲ್ | 101263 | 09/06/16 | 137734.00 |
| 4 | 10883111000256 | 101265 | 10/06/16 | 8556.00 |
| 5 | ಕೆ.ಹೆಚ್.ಮುನಿರಾಜು | 101267 | 13/07/16 | 22600.00 |
| 6 | 10694121000122 | 101268 | 13/07/16 | 23545.00 |
| 7 | ತಿಮ್ಮರಾಯಸ್ವಾಮಿ ಹಾರ್ಡ್‌ವೇರ್ | 101270 | 15/07/16 | 27430.00 |
| 8 | ಎಸ್‌ಎಲ್‌ವಿಆರ್ | 101266 | 20/07/16 | 46392.00 |
| 9 | ಶ್ರೀ ರಾಮಕೃಷ್ಣ ಫರ್ಟಿಲೈಜರ್ಸ್ | 101273 | 25/07/16 | 4473.00 |
| 10 | ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್ | 101272 | 02/08/16 | 16390.00 |
| 11 | ಶ್ರೀ ರಾಮಕೃಷ್ಣ ಫರ್ಟಿಲೈಜರ್ಸ್ | 101274 | 08/09/16 | 36300.00 |
| 12 | ಶ್ರೀ ರಾಮಕೃಷ್ಣ ಫರ್ಟಿಲೈಜರ್ಸ್ | 101275 | 08/09/16 | 10677.00 |
| 13 | ಎಸ್‌ಎಲ್‌ವಿ ಟ್ರೇಡರ್ಸ್ | 101277 | 15/09/16 | 28396.00 |
| 14 | ಎಸ್‌ಎಲ್‌ವಿ ಟ್ರೇಡರ್ಸ್ | 101279 | 29/09/16 | 96650.00 |
| 15 | ಮ್ಯಾನೇಜರ್, ವಿಜಯಾ ಬ್ಯಾಂಕ್ | 101278 | 05/10/16 | 36622.00 |
| 16 | ತಿಮ್ಮರಾಯಸ್ವಾಮಿ ಹಾರ್ಡ್‌ವೇರ್, ವೇಮಗಲ್ | 500304 | 07/10/16 | 15962.00 |
| 17 | ತಿಮ್ಮರಾಯಸ್ವಾಮಿ ಹಾರ್ಡ್‌ವೇರ್, ವೇಮಗಲ್ | 101280 | 07/10/16 | 19864.00 |
| 18 | ಶ್ರೀ ಚೌಡೇಶ್ವರಿ ಏಜೆನ್ಸೀಸ್ | 500303 | 13/10/16 | 49120.00 |
| 19 | ಎಸ್‌ಎಲ್‌ವಿ ಟ್ರೇಡರ್ಸ್ | 500305 | 18/10/16 | 23000.00 |
| 20 | ಎಒ, ಬಿಎಸ್‌ಎನ್‌ಎಲ್, ಕೋಲಾರ | 500301 | 21/10/16 | 2105.00 |
| 21 | ಎಒ, ಬಿಎಸ್‌ಎನ್‌ಎಲ್, ಕೋಲಾರ | 500302 | 21/10/16 | 13314.00 |
| 22 | ಚೌಡೇಶ್ವರಿ ಇಂಜಿನಿಯರಿಂಗ್ | 500306 | 25/11/16 | 46250.00 |

| | | | | |
|---|---|---|---|---|
| | ವರ್ಕ್ಸ್ | | | |
| 23 | ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್ | 500307 | 25/11/16 | 54500.00 |
| 24 | ಎಸ್‌ಬಿ 10865101019306ಗೆ | 500310 | 07/03/17 | 65000.00 |
| 25 | ಮುನಿಯಪ್ಪ | 500312 | 07/03/17 | 19500.00 |
| 26 | 10694121000122 | 500308 | 07/03/17 | 27110.00 |
| 27 | 10694121000122 | 500309 | 07/03/17 | 23938.00 |
| ಒಟ್ಟು ಮೊತ್ತ | | | | 1083066.00 |

2) ಮೇಲೆ ಹೇಳಿದ ಖರ್ಚುಗಳ ಪೈಕಿ ಕ್ರಮ ಸಂಖ್ಯೆ–1 ಮತ್ತು 3ರ ಖರ್ಚುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಬಿಲ್‌ಗಳು ಲಭ್ಯವಿದೆ –

| ಸಂಸ್ಥೆಯ ಹೆಸರು | ಬಿಲ್ ಸಂಖ್ಯೆ\ದಿನಾಂಕ | ಮೊತ್ತ ₹ಗಳಲ್ಲಿ |
|---|---|---|
| ಕ್ರಮ ಸಂಖ್ಯೆ–1ರ ಖರ್ಚು:– | | |
| ಶ್ರೀ ಚೌಡೇಶ್ವರಿ ಏಜೆನ್ಸೀಸ್, ಕೋಲಾರ | 4, 04/04/16 | 23723.00 |
| | 7, 05/04/16 | 24490.00 |
| | 10, 07/04/16 | 24490.00 |
| | 13, 11/04/16 | 24490.00 |
| | 17, 12/04/16 | 24490.00 |
| | 20, 13/04/16 | 5955.00 |
| ಒಟ್ಟು ಮೊತ್ತ | | 127638.00 |
| ಕ್ರಮ ಸಂಖ್ಯೆ–3ರ ಖರ್ಚು:– | | |
| ಶ್ರೀ ತಿಮ್ಮರಾಯಸ್ವಾಮಿ ಹಾರ್ಡ್‌ವೇರ್, ವೇಮಗಲ್ | 834, 02/10/15 | 4847.72 |
| | 835, 02/10/15 | 9653.25 |
| | 837, 03/10/15 | 3922.48 |
| | 839, 04/10/15 | 8897.87 |
| | 840, 04/10/15 | 7295.32 |
| | 842, 05/10/15 | 6741.45 |
| | 843, 06/10/15 | 5664.29 |
| | 844, 06/10/15 | 3912.99 |
| | 846, 07/10/15 | 4542.83 |
| | 847, 07/10/15 | 2823.18 |
| | 848, 08/10/15 | 6229.77 |
| | 850, 08/10/15 | 7026.30 |

BD/12-90/18

(163)



| | | |
|---|---|---|
| | 851, 09/10/15 | 3256.78 |
| | 854, 10/10/15 | 6127.44 |
| | 855, 10/10/15 | 3666.12 |
| | 857, 12/10/15 | 5875.29 |
| | 863, 14/10/15 | 3571.17 |
| | 866, 15/10/15 | 4516.45 |
| | 860, 13/10/15 | 5168.44 |
| | 861, 14/10/15 | 2633.28 |
| | 868, 16/10/15 | 3796.94 |
| | 876, 21/10/15 | 3402.37 |
| | 878, 21/10/15 | 4229.49 |
| | 887, 29/10/15 | 1772.40 |
| | 888, 29/10/15 | 4827.68 |
| | 894, 31/10/15 | 4479.53 |
| | 891, 30/10/15 | 3475.17 |
| | 1223, 19/04/16 | 7748.97 |
| | 836, 03/10/15 | 5391.05 |
| | 1216, 15/04/16 | 8408.35 |
| ಒಟ್ಟು ಮೊತ್ತ | | 153904.40 |

3) ಸದರಿ ಎರಡು ಖರ್ಚುಗಳು ₹1 ಲಕ್ಷ ಮೀರಿದೆ. ಕೆಟಿಪಿಪಿ ಕಾಯಿದೆ, 1999ರ ಕಲಂ 4ರಲ್ಲಿ Exceptions to applicability ಬಗ್ಗೆ ಹೇಳಿದೆ. ಕಲಂ 4(ee) ಈ ಕೆಳಗಿನಂತಿದೆ –

"(ee) – where the procurement of goods or services is by the Gram Panchayats and Taluk Panchayats constituted under the Karnataka Panchayath Raj Act, 1993, Town Municipal Councils or Town Panchayats constituted under Karnataka Municipalities Act, 1964 or Urban Development Authorities constituted under the Karnataka Urban Development Authorities Act, 1987 -

(i) for the purpose of implementing Mini Water Supply Scheme or construction of school rooms and the value of such procurements does not exceed ₹2 lakhs; and

(ii) for other purposes and the value of such procurements does not exceed ₹1 lakh."

164



4) ಕಲಂ 4(ee)(ii) ರಲ್ಲಿ ಹೇಳಿದ "ಇತರೆ ಉದ್ದೇಶ" ಗಳ ವ್ಯಾಪ್ತಿಗೆ ಕ್ರಮ ಸಂಖ್ಯೆ-1 ಮತ್ತು 3ರ ಖರ್ಚುಗಳು ಬರದಿರುವುದರಿಂದ ಕಾಯಿದೆಯನ್ವಯ ಟೆಂಡರ್ ಕರೆಯಬೇಕು. ಆದರೆ, ಸದರಿ ಖರೀದಿಗಳಿಗೆ ಟೆಂಡರ್ ಕರೆಯದೇ ಬೇರೆ ಬೇರೆ ದಿನಾಂಕಗಳಂದು ಸಾಮಗ್ರಿಗಳನ್ನು ಖರೀದಿಸಿದಂತಿರುವ ಬಿಲ್‌ಗಳ ಬಾಬ್ತು ಚೆಕ್ ಅನ್ನು ನೀಡಿರುವುದು ಕಂಡು ಬಂದಿದೆ. ಕಾರಣ, ಸದರಿ ಖರ್ಚುಗಳು ನಿಯಮಬಾಹಿರವಾಗಿದೆ;
5) ಉಳಿದಂತೆ ಕ್ರಮ ಸಂಖ್ಯೆ-2, 4 ರಿಂದ 14, 16 ರಿಂದ 19, 22 ರಿಂದ 25ರ ಖರ್ಚುಗಳಿಗೆ ಸಂಬಂಧಿಸಿದಂತೆ ಆಯಾಯ ಸಂಸ್ಥೆಗಳ ನಗದು\ ಕ್ರೆಡಿಟ್ ಬಿಲ್‌ಗಳಿವೆ;
6) ಮೇಲೆ ಹೇಳಿದ ಖರ್ಚುಗಳ ಪೈಕಿ ಕ್ರಮ ಸಂಖ್ಯೆ-5ಕ್ಕೆ ಸಂಬಂಧಪಟ್ಟ 03 ಬಿಲ್ಲುಗಳು ಶ್ರೀ ಮಾರುತಿ ಸೌಂಡ್ಸ್ & ಡೇರಾ ಹೌಸ್ ರವರದ್ದಾಗಿದ್ದು, ಸದರಿ ಮೂರು ಬಿಲ್ಲುಗಳಿಗೆ ಸಂಬಂಧಿಸಿದಂತೆ ಒಂದೇ ಚೆಕ್ ಅನ್ನು ಶ್ರೀ.ಕೆ.ಹೆಚ್.ಮುನಿರಾಜು ರವರ ಹೆಸರಿಗೆ ನೀಡಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ-49ರನ್ವಯ ಗುತ್ತಿಗೆದಾರರುಗಳಿಗೆ, ಸರಬರಾಜುದಾರರುಗಳಿಗೆ ಮತ್ತು ಇತರೆ ಎಲ್ಲಾ ಪಕ್ಷಗಾರರುಗಳಿಗೆ Account Payee ಚೆಕ್ ಅನ್ನು ನೀಡಬೇಕು. ಆದರೆ, ಬಿಲ್ಲುಗಳು ಸಂಸ್ಥೆಯ ಹೆಸರಿನಲ್ಲಿದ್ದು, ಚೆಕ್ ಅನ್ನು ವ್ಯಕ್ತಿಯ ಹೆಸರಿಗೆ ನೀಡಿರುವುದು ಕಂಡು ಬಂದಿದೆ;
7) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 43 ಈ ಕೆಳಗಿನಂತಿದೆ –

> **43. Payment to be supported by Bill or Voucher** - Every payment charged to the Gram Panchayath Fund shall be supported by a Bill or Voucher and shall bear an order to pay the specified amount, which shall be expressed both in figures and words and the word 'only' being added at the end of the amount written in words. [For example, a claim for rupees Seventy-five should be expressed as "Rs.75.00" in figures and as "Rupees Seventy-five only" in words.] Every such order to pay shall be signed by the Officer or Authority to be authorized by the Government, as per the approval accorded by the Gram Panchayath. An endorsement of payment shall be made on every bill noting the number and date of the cheque in which the claim has been paid and the same shall be attested by the Secretary.
>
> **Explanation** - A bill is a statement of claims against the Gram Panchayath, containing the specification of the service or supply, the amount involved, either in gross or by 'item' and it shall include such a payment presented in the form of a simple receipt. A bill becomes a Voucher when it is paid."

8) ನಿಯಮ–43ರನ್ವಯ ಒಂದು ಬಿಲ್ಲಿಗೆ ಒಂದು ಚೆಕ್ ಅನ್ನು ನೀಡಬೇಕು. ಆದರೆ, ಕ್ರಮ ಸಂಖ್ಯೆ–1 ರಿಂದ 14, 16 ರಿಂದ 19, 22 ರಿಂದ 25ರ ಖರ್ಚುಗಳಿಗೆ ಸಂಬಂಧಿಸಿದ ದಾಖಲೆಗಳನ್ವಯ ಒಂದು ಬಿಲ್ಲಿಗೆ ಒಂದು ಚೆಕ್ ಅನ್ನು ನೀಡದೇ, ಒಂದಕ್ಕಿಂತ ಹೆಚ್ಚಿನ ಬಿಲ್ಲುಗಳಿಗೆ ಚೆಕ್‌ಗಳನ್ನು ನೀಡಿರುವುದು ಕಂಡು ಬಂದಿದೆ;

9) ಕ್ರಮ ಸಂಖ್ಯೆ–15ರ ಮೊತ್ತವನ್ನು ಪಂಚಾಯತ್‌ನ 14ನೇ ಹಣಕಾಸು ಯೋಜನೆ ಖಾತೆಯಿಂದ ಅಂಗವಿಕಲರ ಕಲ್ಯಾಣ ನಿಧಿ ಖಾತೆ ಸಂಖ್ಯೆ:115901011001010ಗೆ ವರ್ಗಾವಣೆ ಮಾಡಿದೆ;

10) ಕ್ರಮ ಸಂಖ್ಯೆ–20 ಮತ್ತು 21 ಚೆಕ್‌ಗಳಲ್ಲಿ ಹಣವನ್ನು ಬಿಎಸ್‌ಎನ್‌ಎಲ್, ಕೋಲಾರ ರವರಿಗೆ ನೀಡಿದ ಬಾಬ್ತು ಎರಡು ಬಿಲ್ಲುಗಳು ಲಭ್ಯವಿದೆ. ಸದರಿ ಮೊತ್ತವನ್ನು ಪಂಚಾಯತ್‌ನ ಟೆಲಿಫೋನ್ ಬಿಲ್ಲುಗಳ ಬಾಬ್ತು ನೀಡಿರುವುದಾಗಿ ಕಂಡು ಬಂದಿದೆ. ಒಂದು ಉದ್ದೇಶಕ್ಕೆ ಮೀಸಲಿರಿಸಿದ ಹಣವನ್ನು ಬೇರೆ ಉದ್ದೇಶಕ್ಕೆ ಖರ್ಚು ಮಾಡಿರುವುದು ಕ್ರಮ ಸಂಖ್ಯೆ:20 ಮತ್ತು 21ರ ವ್ಯವಹರಣೆ [Transactions] ಯಲ್ಲಿ ಕಂಡು ಬಂದಿದೆ;

11) ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಗ್ರಾಪಸ 2015 ದಿ:08/02/16ರಲ್ಲಿ 14ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಮಾರ್ಗಸೂಚಿಗಳನ್ನು ಎಲ್ಲಾ ಪಂಚಾಯತ್‌ಗಳಿಗೆ ತಿಳಿಸಿದೆ. ದಿ:17/03/17ರ ಸಮ ಸಂಖ್ಯೆಯ ಸುತ್ತೋಲೆಯಲ್ಲಿಯೂ ಮುಂದುವರಿದ ಮಾರ್ಗಸೂಚಿಗಳನ್ನು ತಿಳಿಸಿದ್ದು, ಸದರಿ ಸುತ್ತೋಲೆಗಳಲ್ಲಿನ ಅಂಶಗಳನ್ವಯ 14ನೇ ಹಣಕಾಸು ಆಯೋಗದ ಅನುದಾನವನ್ನು ದೂರವಾಣಿ ಬಿಲ್ ಪಾವತಿಗೆ ಬಳಸಲು ಅವಕಾಶವಿಲ್ಲ. ಕಾರಣ, ಕ್ರಮ ಸಂಖ್ಯೆ–20 ಮತ್ತು 21ರ ಖರ್ಚುಗಳು ನಿಯಮಬಾಹಿರವಾಗಿದೆ;

12) ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 65 ಈ ಕೆಳಗಿನಂತಿದೆ –

> **65. Telephone connection & charges** - Gram Panchayath is competent to accord sanction for installation of telephone only in a Gram Panchayath office by means of a resolution. A trunk call register shall be maintained by the Secretary of the Gram Panchayath to record details of the calls made, persons making the call, telephone number of person called, place, whether official or private expenditure on each call etc. Cost of private calls shall be recovered from the concerned by issue of an official receipt in Form No.3.
>
> **Note** - 1. STD facility is not allowed
>
> 2. **Monthly expenditure on telephone shall not exceed ₹1,000/-**

ಟಿಪ್ಪಣಿ–2 ರನ್ವಯ ಗ್ರಾಮ ಪಂಚಾಯತ್‌ನ ಪ್ರತಿ ತಿಂಗಳ ದೂರವಾಣಿ ಖರ್ಚು ₹1,000/– ಮೀರತಕ್ಕದ್ದಲ್ಲ. ಆದರೆ, ಕಡತದಲ್ಲಿ ಲಭ್ಯವಿರುವ ದಿ:06/09/16ರ ಬಿಲ್ ಅನ್ವಯ ಹಿಂದಿನ ತಿಂಗಳ ಅಂದರೆ, ಆಗಸ್ಟ್, 2016ರ ಪಂಚಾಯತ್‌ನ ದೂರವಾಣಿ ಬಿಲ್ ಮೊತ್ತ ₹3,328.66

ಆಗಿದೆ. ಸದರಿ ಖರ್ಚಿನ ಪೈಕಿ ₹2,328.66 [₹3328.66 – ₹1000.00] ಖರ್ಚು ಮೇಲೆ ಹೇಳಿದ ನಿಯಮಗಳಿಗೆ ವಿರುದ್ಧವಾಗಿದೆ;

13) ಕ್ರಮ ಸಂಖ್ಯೆ–26 ಮತ್ತು 27 ಖರ್ಚುಗಳಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳಿಲ್ಲ;

14) ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ₹5,000/– ಮೀರಿದ ₹1,00,000/–ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಆದರೆ, ಕ್ರಮ ಸಂಖ್ಯೆ–1 ರಿಂದ 14, 16 ರಿಂದ 19, 22 ರಿಂದ 25ರ ಖರ್ಚುಗಳಿಗೆ ಸಂಬಂಧಿಸಿದಂತೆ ದರಪಟ್ಟಿಯನ್ನು ಆಹ್ವಾನಿಸಿದ ದಾಖಲೆಗಳಿಲ್ಲ;

15) ಮೇಲೆ ಹೇಳಿದ ಖರ್ಚುಗಳಿಗೆ ಸಂಬಂಧಿಸಿದಂತೆ ನಿಯಮ 104ರನ್ವಯ ನಮೂನೆ–49ರಲ್ಲಿ ಪಂಚಾಯತ್‌ನಲ್ಲಿ ನಿರ್ವಹಿಸಲಾದ ನಗದು ಪುಸ್ತಕ ಇಲ್ಲ;

16) ಈಗಾಗಲೇ ಹೇಳಿದಂತೆ ಕ್ರಮ ಸಂಖ್ಯೆ–15ರ ಮೊತ್ತವನ್ನು ಪಂಚಾಯತ್‌ನ ಇನ್ನೊಂದು ಖಾತೆಗೆ ವರ್ಗಾವಣೆ ಮಾಡಿದೆ. ಸದರಿ ವರ್ಗಾವಣೆಯಲ್ಲಿ ಯಾವುದೇ ಅಕ್ರಮ ಕಂಡು ಬಂದಿಲ್ಲ. ಇನ್ನುಳಿದಂತೆ, ಮೇಲಿನ ಉಪ ಖಂಡಿಕೆ–1ರಲ್ಲಿ ಹೇಳಿದ ಕ್ರಮ ಸಂಖ್ಯೆ–1 ರಿಂದ 27ರ ಖರ್ಚುಗಳ ಪೈಕಿ ಕ್ರಮ ಸಂಖ್ಯೆ–1 ರಿಂದ 14, 16 ರಿಂದ 19 ರಿಂದ 27ರ ಖರ್ಚುಗಳು ನಿಯಮಬಾಹಿರವಾಗಿದೆ. ಕ್ರಮ ಸಂಖ್ಯೆ–26 ಮತ್ತು 27ರ ಖರ್ಚಿಗೆ ಸಂಬಂಧಿಸಿದ ದಾಖಲೆಗಳಿಲ್ಲವಾದ್ದರಿಂದ, ಸದರಿ ಎರಡು ಖರ್ಚುಗಳ ಬಾಬ್ತು ಒಟ್ಟು ಮೊತ್ತ ₹51,048/- ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

17) ಮೇಲೆ ಹೇಳಿದ ಖರ್ಚುಗಳ ಅವಧಿಯಲ್ಲಿ 1ನೇ ಎದುರುದಾರರು – ಶ್ರೀಮತಿ.ಮಂಜುಳಮ್ಮ ರವರು ಚೌಡದೇನಹಳ್ಳಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿ ಮತ್ತು 2ನೇ ಎದುರುದಾರರು – ಶ್ರೀ.ಕೆ.ಶಿವಾನಂದ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಮೇಲೆ ಹೇಳಿದ ಲೋಪಗಳಿಗೆ ಸದರಿಯವರುಗಳು ಜವಾಬ್ದಾರರೆಂದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಮೂರನೇ (3ನೇ) ಎದುರುದಾರರು ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸದೇ ಇರುವುದರಿಂದ, ಸದರಿಯವರ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

BD/11290/18



167

10. ಶ್ರೀಮತಿ.ಮಂಜುಳಮ್ಮ, ಅಧ್ಯಕ್ಷರು – 1ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

11. ಶ್ರೀ.ಕೆ.ಶಿವಾನಂದ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ – 2ನೇ ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿದೆ.

12. ಅದಲ್ಲದೆ, ಶ್ರೀ.ಕೆ.ಶಿವಾನಂದ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ – 2ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

13. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ

4-8-20

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**

3/8